# ಶಿವಣ್ಣನ ವ್ರತಭಂಗ!




'ನಾನು ರಿಮೇಕ್ ಸಿನಿಮಾದಲ್ಲಿ ನಟಿಸಲ್ಲ' ಎಂಬ ಮಾತನ್ನು ಶಿವರಾಜ್‌ಕುಮಾರ್ ವ್ರತದ ಹಾಗೆ ಪಾಲಿಸಿಕೊಂಡು ಬಂದಿದ್ದರು. ಆದರೆ ಈಗ ಅವರ ವ್ರತ ಭಂಗಗೊಂಡಿದೆ. ಮಯಲಾಳಂನ 'ಒಪ್ಪಂ' ಸಿನಿಮಾದ ಕನ್ನಡ ಅವತರಣಿಕೆ 'ಕವಚ'ದಲ್ಲಿ ಅವರು ನಟಿಸಿದ್ದು, ಡಿಸೆಂಬರ್ ಮೊದಲ ವಾರದಲ್ಲಿ ಚಿತ್ರ ಬಿಡುಗಡೆಯಾಗಲು ಸಜ್ಜಾಗಿದೆ.

ತಮ್ಮ ಮಾತನ್ನು ಮುರಿಯಲು ಕಾರಣ ಏನು? 'ಚಿತ್ರ ಮತ್ತು ಪಾತ್ರ' ಎನ್ನುತ್ತಾರೆ ಶಿವಣ್ಣ. ಮಲಯಾಳಂನಲ್ಲಿ ಮೋಹನ್‌ಲಾಲ್ ನಟಿಸಿದ್ದ ಪಾತ್ರದಲ್ಲಿ ಶಿವಣ್ಣ ಕಾಣಿಸಿಕೊಳ್ಳುತ್ತಿದ್ದಾರೆ. ಅದು ಅಂಧ ತಂದೆ ಮತ್ತು ಮುದ್ದಿನ ಮಗಳ ಕಥೆ. ಆ ಪಾತ್ರವೇ ಶಿವಣ್ಣನ ಮನಸ್ಸನ್ನು ತಾಕಿದೆ. ಇಂಥ ಪಾತ್ರದಲ್ಲಿ ಕಾಣಿಸಿಕೊಳ್ಳುವ ಅವಕಾಶ ಸಿಗುತ್ತದೆ ಎಂದಾದರೆ ರಿಮೇಕ್ ಆದರೂ ಸರಿ ಎಂದು ಅವರಿಗೆ ಅನಿಸಿದೆ.

'ಕವಚ'ಕ್ಕೆ ಆ್ಯಕ್ಷನ್–ಕಟ್ ಹೇಳಿರುವುದು ಜಿ.ವಿ.ಆರ್ ವಾಸು. ರಾಮ್‌ಗೋಪಾಲ್ ವರ್ಮ ಜತೆಯಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿರುವ ಅನುಭವ ಇರುವ ವಾಸು, ಕನ್ನಡದಲ್ಲಿ ಶಿವಣ್ಣನಿಗೆ ಕವಚ ತೊಡಿಸಲು ಸಿದ್ಧರಾಗಿದ್ದಾರೆ.

ಈ ಪಾತ್ರವನ್ನು ಒಪ್ಪಿಕೊಳ್ಳುವಾಗ ಶಿವರಾಜ್‌ಕುಮಾರ್ ಅವರಲ್ಲಿಯೂ ಅಳುಕಿತ್ತಂತೆ. ಯಾಕೆಂದರೆ ಅಂಥನ ಪಾತ್ರದಲ್ಲಿ ಅವರು ಹಿಂದೆಂದೂ ಕಾಣಿಸಿಕೊಂಡಿಲ್ಲ. ಆದರೆ ಆ ಪಾತ್ರದಲ್ಲಿ ನಟಿಸುತ್ತ ನಟಿಸುತ್ತ ಆ ಅಳುಕಿನ ಜಾಗದಲ್ಲಿ ಸಂತೃಪ್ತಿ ತುಂಬಿಕೊಂಡಿದೆಯಂತೆ. ಕೃತಿಕಾ ಈ ಚಿತ್ರದ ನಾಯಕಿಯಾಗಿ ನಟಿಸಿದ್ದಾರೆ. ಬಾಲಿವುಡ್ ನಟಿ ಇಶಾ ಕೊಪ್ಪಿಕರ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ.'ಕವಚ'ದ ನಂತರ ಶಿವಣ್ಣ ಇನ್ನೊಂದು ರಿಮೇಕ್ ಚಿತ್ರದಲ್ಲಿ ನಟಿಸಲು ಒಪ್ಪಿಕೊಂಡಿದ್ದಾರೆ. ಹಾಗೆಂದು ಸ್ವಮೇಕ್ ಚಿತ್ರದ ಕುರಿತು ಅವರ ಬದ್ಧತೆ ಕಡಿಮೆಯಾಗಿಲ್ಲ. 'ಈಗಲೂ ಕಮರ್ಷಿಯಲ್ ರೂಪದ ರಿಮೇಕ್ ಚಿತ್ರಗಳಲ್ಲಿ ನಟಿಸಲಾರೆ' ಎಂದೇ ಅವರು ಹೇಳುತ್ತಿದ್ದಾರೆ.

# ಸಂಬಂಧ- ಸಂಘರ್ಷದ ಸಹಯಾನ


ಅನೂಷಾ


ಕಿರಣ್ ಹೆಗಡೆ

ಅವರು ಎಷ್ಟೋ ವರ್ಷದ ನಂತರ ಭೇಟಿಯಾದ ಸ್ನೇಹಿತರು. ಪಶ್ಚಿಮ ಘಟ್ಟದ ದಟ್ಟ ಕಾನನದ ನಡುವೆ ಚಾರಣ ಕೈಗೊಳ್ಳುವ ನಿರ್ಧಾರ ಮಾಡಿದ್ದಾರೆ. ಅದು ಅವರ ಪಾಲಿಗೆ ಕಾಡ ನಡುವಿನ ನಡಿಗೆಯಷ್ಟೇ ಅಲ್ಲ; ಹಳೆಯ ನೆನಪುಗಳು ಮತ್ತು ನಾಳಿನ ಕನಸುಗಳನ್ನು ಹಂಚಿಕೊಳ್ಳುವ ಸಹಯಾನವೂ ಹೌದು. ಒಟ್ಟಾಗಿ ಕಳೆದ ನೆನಪುಗಳು, ಪ್ರೇಮ, ವೈಫಲ್ಯ, ಬದುಕಿನ ತಿರುವುಗಳು ಎಲ್ಲವೂ ಆ ದಾರಿಯ ಸವೆಸುವ ಇಂಧನಗಳಾಗಿವೆ. ಸಂಬಂಧದ ಅನುಬಂಧದ ಜತೆಗೆ ಸಂಘರ್ಷದ ಕಿಡಿಯೂ ಇದೆ.

ಇಂಥದ್ದೊಂದು ಚಾರಣದ ಕಥೆಯನ್ನಿಟ್ಟುಕೊಂಡು ಪ್ರೇಕ್ಷರನ್ನು ಮುಟ್ಟಲು ಹೊರಟಿದ್ದಾರೆ ಕಿರಣ್ ಹೆಗಡೆ. ಕಿರಣ್ ಅವರಿಗಿದು ನಿರ್ದೇಶನದ ಚೊಚ್ಚಲ ಸಿನಿಮಾ. ಈ ಚಿತ್ರದ ಶೀರ್ಷಿಕೆಯ 'ಮನರೂಪ'. ಶೀರ್ಷಿಕೆಯೇ ಹೂರಣವನ್ನೂ ಸೂಚಿಸುವ ಹಾಗಿದೆ.

40 ಗಂಟೆಗಳ ಅವಧಿಯಲ್ಲಿ ಇಡೀ ಸಿನಿಮಾ ಘಟಿಸುತ್ತದಂತೆ. ಕಾಡಿನಲ್ಲಿ 43 ದಿನಗಳ ಚಿತ್ರೀಕರಣ ಮುಗಿಸಿರುವ ತಂಡ ಇದೀಗ ಪೋಸ್ಟ್ ಪ್ರೊಡಕ್ಷನ್ ಕೆಲಸದಲ್ಲಿ ಮುಳುಗಿದೆ. ಲೋಕಿ ಮತ್ತು ಸೂರಿ ದೃಶ್ಯಗಳ ಸಂಯೋಜನೆಯಲ್ಲಿ ತೊಡಗಿದ್ದಾರೆ. ರಂಗಭೂಮಿ ನಟ ದಿಲೀಪ್‌ಕುಮಾರ್ ಮುಖ್ಯಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅನುಷಾ ರಾವ್, ನಿಷಾ ಬಿ.ಆರ್. ಮುಖ್ಯ ಭೂಮಿಕೆಯಲ್ಲಿದ್ದಾರೆ. ವಿಶೇಷ ಪಾತ್ರವೊಂದರಲ್ಲಿ ಬಿ. ಸುರೇಶ ಕಾಣಿಸಿ ಕೊಂಡಿದ್ದಾರೆ.


ಆರ್ಯನ್


ನಿಷಾ